(ಇಂದು ದಿನಾಂಕಃ 11-12-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು)

**ಪಾಟೀ ಸವಾಲುಃ 3 ರಿಂದ 8 ನೇ ಪ್ರತಿವಾದಿ ಪರ JPA ವಕೀಲರಿಂದಃ**

ನಾನು 10 ತರಗತಿಯವರೆಗೆ ಕಲಿತಿರುತ್ತೇನೆ. ಸುಮಾರು 25 ವರ್ಷಗಳ ಹಿಂದೆ ನಮ್ಮ ತಂದೆಗೆ ಲಕ್ವ ಆಗಿತ್ತು. ಅವರು ರಾಮತೀರ್ಥ ಮತ್ತು ಹಲಚೇರಾದಲ್ಲಿ ವಾಸವಿದ್ದರು. ಹಲಚೇರಾದಲ್ಲಿ ವಾಸವಿದ್ದ ಬಗ್ಗೆ ತೋರಿಸಲು ದಾಖಲಾತಿ ಇಲ್ಲ ಎಂದರೆ ಸರಿ. ವಾದಿ ಮದುವೆಯಾದ ನಂತರ ತನ್ನ ಗಂಡನ ಮನೆಯಲ್ಲಿ ಇರುತ್ತಾಳೆ ಎಂದರೆ ಗಂಡನ ಮನೆಯಲ್ಲಿ ಮತ್ತು ಹಲಚೇರಾ ಗ್ರಾಮ ಮತ್ತು ರಾಮತೀರ್ಥ ಗ್ರಾಮದಲ್ಲಿ ವಾಸ ಇದ್ದರು. ನಾವು ಬೇರೆಯಾಗಿರುವುದಿಲ್ಲ ಜಂಟಿ ಕುಟುಂಬದಲ್ಲಿ ಇರುತ್ತೇವೆ.

ಸುಭಾಷ ಎಂಬುವವರು ಮನೆತನದ ಹಿರಿತನವನ್ನು ಮಾಡುತ್ತಾರೆ. ಕುಟುಂಬದ ನಿರ್ವಹಣೆಯನ್ನು ಅವರೇ ಮಾಡುತ್ತಾರೆ. ಸುಭಾಷ ಬಂದ ಆದಾಯದಲ್ಲಿ ಇತರ ಸದಸ್ಯರಿಗೆ ಹಂಚಿಕೆ ಮಾಡಿರುವುದಿಲ್ಲ. ಸುಭಾಷನಿಗೆ ಬರುವ ಆದಾಯವನ್ನು ಹೊರತುಪಡಿಸಿ ಬೇರೆ ಆದಾಯ ನಮ್ಮ ಕುಟುಂಬಕ್ಕೆ ಇರುವುದಿಲ್ಲ ಎಂದರೆ ಸರಿ. ನಮ್ಮ ಖರ್ಚಿಗೆ ಆಗುವಷ್ಟು ಮಾತ್ರ ಕೊಡುತ್ತಿದ್ದನು. ಸ್ವಲ್ಪ ಕೊಡುತ್ತಿದ್ದ ನಿಖರವಾಗಿ ಹೇಳಲು ಬರುವುದಿಲ್ಲ.

ನಾಗೇಂದ್ರಪ್ಪನ ಹೆಸರಿನಲ್ಲಿರುವ ಆಸ್ತಿಯು ಜಂಟಿ ಕುಟುಂಬದ ಆಸ್ತಿ. ಸುಭಾಷಚಂದ್ರರವರ ಹೆಂಡತಿಯ ಊರು ಹಲಚೇರಾ. ಸುಭಾಷಚಂದ್ರ ನೌಕರಿ ಮಾಡುತ್ತಿದ್ದರು ಎಂದರೆ ಸರಿ. ಸುಭಾಷಚಂದ್ರ ಮತ್ತು ಆತನ ಹೆಂಡತಿ ರುಕ್ಮಿಣಿ ಬಾಯಿಯವರ ತಂದೆಯ ಮನೆಯಲ್ಲಿ ವಾಸವಿದ್ದರು ಎಂದರೆ ಸರಿಯಲ್ಲ. ಬೇರೆಯಾಗಿ ವಾಸವಿದ್ದರು.

ರುಕ್ಮಿಣಿಬಾಯಿ ತಂದೆ ತಾಯಿ ಆರ್ಥಿಕ ಸ್ಥಿತಿವಂತರು ಎಂದರೆ ಸರಿ. ಸ.ನಂ.94/ಎ ಕ್ಷೇತ್ರ 8 ಎಕರೆ 00 ಗುಂಟೆ ಆಸ್ತಿಯು ರುಕ್ಮಿಣಿಬಾಯಿಯವರ ತಂದೆ ತಾಯಿಂದ ಅವರಿಗೆ ವರೋಪಚಾರವಾಗಿ ನೀಡಿದ ಆಸ್ತಿ ಎಂದರೆ ಸರಿಯಲ್ಲ. ಅದು ಖರೀದಿ ಪಡೆದ ಆಸ್ತಿ ಇರುತ್ತದೆ. ರುಕ್ಮಿಣಿಬಾಯಿ ತಂದೆ ತಾಯಿಗೆ ಆಸ್ತಿ ಮಾರುವ ಪರಿಸ್ಥಿತಿ ಬಂದಿರಲಿಲ್ಲ ಎಂದರೆ ಸರಿಯಲ್ಲ. ಅದನ್ನು ಸುಬ್ಬಣ್ಣ ಖರೀದಿ ಮಾಡಿರುತ್ತಾನೆ. ಎಷ್ಟು ಹಣಕ್ಕೆ, ಯಾವ ವರ್ಷ, ದಿನಾಂಕದಂದು ಖರೀದಿ ಮಾಡಿರುತ್ತಾನೆ ಎಂದು ಹೇಳಲು ಬರುವುದಿಲ್ಲ. ಒಟ್ಟು 81 ಎಕರೆ ಜಮೀನನ್ನು ಖರೀದಿ ಮಾಡಿರುತ್ತಾನೆ. ರುಕ್ಮಿಣಿಬಾಯಿಗೆ ನೀಡಿದ ಆಸ್ತಿಯ ಆದಾಯವನ್ನು ರುಕ್ಮಿಣಿಬಾಯಿಯವರೆ

ಪಡೆಯುತ್ತಿದ್ದರು ಎಂದರೆ ಜಂಟಿ ಕುಟುಂಬದಲ್ಲಿ ಸೇರಿಸುತ್ತಿದ್ದರು. ನಾವು ಖರೀದಿ ಮಾಡಿರುತ್ತಾರೆ ಎಂದು ತೋರಿಸಲು ದಾಖಲಾತಿಯನ್ನು ಸಲ್ಲಿಸಿರುತ್ತೇನೆ.

ಕುಟುಂಬದ ಮಾಹಿತಿಯು ನನಗಿಂತ ನನ್ನ ತಾಯಿಗೆ ಹೆಚ್ಚು ಮಾಹಿತಿ ಇರುತ್ತದೆ ಎಂದರೆ ಸರಿ. ಬಸವರಾಜನಿಗೆ ಮಾಹಿತಿ ಇರುವುದಿಲ್ಲ ಆತ ಹುಚ್ಚನಿರುತ್ತಾನೆ. ನಾಗೇಂದ್ರಪ್ಪ ಸುಭಾಷಗಿಂತ ಹೆಚ್ಚಿನ ವಿದ್ಯಾಭ್ಯಾಸ ಪಡೆದಿರುತ್ತಾನೆ ಎಂದರೆ ಸರಿ. ಆತನಿಗೆ ಹೆಚ್ಚು ಕುಟುಂಬದ ಜ್ಞಾನ ಇರುತ್ತದೆ ಎಂದರೆ ಸರಿ.

ಹಲಚೇರಾದಲ್ಲಿ ವ್ಯಕ್ತಿಗತವಾಗಿ ನನ್ನ ಹೆಸರಿನಲ್ಲಿ ಮನೆ, ಜಮೀನು ಇರುವುದಿಲ್ಲ. ವಾದಿಯ ಮಗಳನ್ನು ಚಂದ್ರಕಾಂತನಿಗೆ ಮದುವೆ ಮಾಡಿ ಕೊಟ್ಟಿರುತ್ತಾರೆ ಎಂದರೆ ಸರಿ. ಆತನು ಪ್ರತಿವಾದಿ  ನಂಬರ 15 ಎಂದರೆ ಸರಿ. ಪ್ರತಿವಾದಿ ನಂಬರ 2 ಬಸವರಾಜ ನನ್ನ ಮೇಲೆ ಆಸ್ತಿಯ ಸಲುವಾಗಿ ಕ್ರಿಮಿನಲ್ ಕೇಸ್ ದಾಖಲಸಿರುತ್ತಾನೆ ಎಂದರೆ ಸರಿಯಲ್ಲ. ಆದರೆ ಕ್ರಿಮಿನಲ್ ಕೇಸ್ ದಾಖಲಿಸಿರುತ್ತಾನೆ. ಎಲ್ಲರೂ ರಾಮತೀರ್ಥ ಮತ್ತು ಹಲಚೇರಾದಲ್ಲಿ ಇರುತ್ತೇವೆ. ನಾವು ಆತನ ಆಸ್ತಿಯಲ್ಲಿ ಬೆಳೆದಿರುವ ಬೆಳೆಗಳಿಗೆ ಹಾನಿ ಮಾಡಿದ್ದರಿಂದ ಆತನು ಕೇಸನ್ನು ದಾಖಲಿಸಿರುತ್ತಾನೆ ಎಂದರೆ ಸರಿಯಲ್ಲ. ಸ.ನಂ. 11/2 ವಿಜಯಕುಮಾರ ಹೆಸರಿನಲ್ಲಿದೆ ಎಂದರೆ ಎಲ್ಲವೂ ಅವರ ಮಕ್ಕಳ ಹೆಸರಿನಲ್ಲಿವೆ.

ದಾವಾ ಶೆಡ್ಯೂಲ್ ಎ ಮತ್ತು ಬಿ ಆಸ್ತಿಗಳು ಬೇರೆ ಬೇರೆ ಹೆಸರಿನಲ್ಲಿವೆ ಎಂದರೆ ಸರಿ. ದಾವಾ ಶೆಡ್ಯೂಲ್ ಬಿ ಆಸ್ತಿಗಳು ಖರೀದಿ ಪ್ರಯುಕ್ತ ಅವರವರ ಹೆಸರಿಗೆ ದಾಖಲಾಗಿವೆ ಎಂದರೆ ಸರಿಯಲ್ಲ. ನಮ್ಮ ಅಣ್ಣ ಅವರವರ ಹೆಸರಿಗೆ ದಾಖಲಿಸಿರುತ್ತಾನೆ. ಸುಭಾಷನು ತನ್ನ ಸ್ವಂತ ನೌಕರಿ ಆದಾಯದಿಂದ ಹಾಗೂ ತನ್ನ ಹೆಂಡತಿಯ ಹೆಸರಿಗೆ ಬಂದ ಜಮೀನಿನ ಆದಾಯದಿಂದ ದಾವಾ ಸ್ವತ್ತುಗಳನ್ನು ಖರೀದಿ ಮಾಡಿರುತ್ತಾನೆ ಎಂದರೆ ಸರಿಯಲ್ಲ. ಬಸವರಾಜನು ತನ್ನ ಮಕ್ಕಳ ಹೆಸರಿನಲ್ಲಿ ಆಸ್ತಿಯನ್ನು ಖರೀದಿಸುವಾಗ ನಾವು ಪ್ರಶ್ನಿಸಿಲ್ಲ ಎಂದರೆ ಸರಿಯಲ್ಲ. ನಮ್ಮ ತಂದೆ ತೀರಿಕೊಂಡು 23 ವರ್ಷಗಳು ಗತಿಸಿರುತ್ತವೆ. ನಮ್ಮ ತಂದೆ ತೀರಿಕೊಂಡ ನಂತರ ಪಾಲು ವಿಭಾಗ ಕೇಳಿರುತ್ತೇವೆ, ಕೊಡದ ಕಾರಣ ದಾವೆಯನ್ನು ದಾಖಲಿಸಿರುತ್ತೇವೆ. ನಮ್ಮ ತಂದೆ ಜೀವಂತ ಇರುವಾಗ ಆತನು ಮರಣ ಹೊಂದಿದ ನಂತರವೂ ಪಾಲು ವಿಭಾಗ ಕೇಳಿಕೊಂಡು ಬಂದಿರುತ್ತೇವೆ.

ನನ್ನ ಹೆಸರಿನಲ್ಲಿ ಆಸ್ತಿಯನ್ನು ಖರೀದಿ ಮಾಡಿರುವುದಿಲ್ಲ. ನನ್ನ ಹೆಸರಿನಲ್ಲಿ ಆಸ್ತಿ ಇರುವುದಿಲ್ಲ. ನನ್ನ ಹೆಂಡತಿಯ ಹೆಸರಿನಲ್ಲಿ ಹೊಲ ಇದೆ ಎಂದರೆ ಅದನ್ನು ಪೋಲೀಸ ಪಾಟೀಲ

ಮತ್ತು ಲಕ್ಷ್ಮಿಬಾಯಿ ಗೌಡರು ದಾನವಾಗಿ ನೀಡಿರುತ್ತಾರೆ. ನಮ್ಮ ಕುಲ ಮತ್ತು ಅವರ ಕುಲ ಬೇರೆ ಎಂದರೆ ಸರಿ. ಆದರೆ ನಾವು 30 ವರ್ಷಗಳವರೆಗೆ ಅವರ ಆಸ್ತಿಯ ನಿರ್ವಹಣೆಯನ್ನು ಮಾಡಿರುತ್ತೇವೆ. ಆ ಬಗ್ಗೆ ನಿ.ಪಿ-45 ದಾನ ಪತ್ರದಲ್ಲಿ ಬರೆದಿಲ್ಲ ಎಂದರೆ ಸರಿಯಲ್ಲ.

ನಿ.ಪಿ-45 ರಂತೆ ದಾನ ಪತ್ರಕ್ಕಿಂತ ಮುಂಚೆ ಖರೀದಿ ಕರಾರು ಪತ್ರ ನೋಟರಿರವರ ಮುಂದೆ ಆಗಿತ್ತು ಎಂದರೆ ಸರಿ, ಅದನ್ನು ನನ್ನ ಹೆಸರಿನಲ್ಲಿ ಮಾಡಿಕೊಂಡಿರುತ್ತೇನೆ. ನಾನು ಸಾಲ ಕೊಟ್ಟಿದ್ದರಿಂದ ಕರಾರು ಪತ್ರ ಮಾಡಿಕೊಂಡಿರುತ್ತೇನೆ. ನಾನು ಬೇರೆ ತೋಟದ ಮೇಲೆ ಸಾಲ ನೀಡಿದ್ದರಿಂದ ಕರಾರು ಪತ್ರ ಮಾಡಿಕೊಂಡಿರುತ್ತೇನೆ. ಅದನ್ನು ಪಾಲಿನ ರೀತಿಯಲ್ಲಿ ಮಾಡಿರುತ್ತೇನೆ. ನನ್ನ ಹೆಂಡತಿಯ ಹೆಸರಿನಲ್ಲಿರುವ ಆಸ್ತಿಯು ಖರೀದಿ ಪಡೆದ ಆಸ್ತಿಯಾಗಿರುತ್ತದೆ ಎಂದರೆ ಸರಿಯಲ್ಲ. ಅದರಲ್ಲಿ ಪಾಲು ವಿಭಾಗ ನೀಡಬೇಕಾಗುತ್ತದೆ ಎಂದು ನಿ.ಪಿ-45 ರಂತೆ ದಾನಪತ್ರವನ್ನು ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ. ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ, ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**(ಮುಂದುವರಿದ ಪಾಟೀ ಸವಾಲಿಗೆ ಸಮಯ ಕೋರಿದ್ದು ಕಲ್ಪಿಸಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಜೆ.ಎಮ್. ಎಫ್. ಸಿ, ಚಿಂಚೋಳಿ.